ಮಾಡಲ್ಲ' ಎಂದ ಅವರಿಗೆ– 'ಒಮ್ಮೆ ಕಥೆ ಕೇಳಿ. ಆಮೇಲೆ ಡಿಸೈಡ್ ಮಾಡಿ' ಎಂದು ಒಪ್ಪಿಸಿದ್ದೂ ಇಮ್ರಾನ್ ಅವರೇ.

ಲೋಹಿತ್ ಅವರು ಹೇಳಿದ ಕಥೆಯೇನೋ ಅನುಶ್ರೀ ಅವರಿಗೆ ತುಂಬ ಇಷ್ಟವಾಯ್ತು. ಆದರೆ ಸಿನಿಮಾದಲ್ಲಿ ನಟಿಸಬೇಕೇ ಬೇಡವೇ ಎಂಬ ಕುರಿತು ಅವರಿಗಿನ್ನೂ ಅನುಮಾನ ಇದ್ದೇ ಇತ್ತು. 'ನನ್ನನ್ನು ಹಿರಿತೆರೆಯಲ್ಲಿ ಯಾರು ನೋಡ್ತಾರೆ?' ಎನ್ನುತ್ತಿದ್ದ ಅವರನ್ನು ಲೋಹಿತ್ ಅವರೇ ಕನ್ವಿನ್ಸ್ ಮಾಡಿ ಒಪ್ಪಿಸಿದ್ದು.

'ಈ ಸಿನಿಮಾದಲ್ಲಿ ಲವ್ ಸ್ಟೋರಿ ಇಲ್ಲ. ರೊಮ್ಯಾಂಟಿಕ್ ಹಾಡುಗಳಿಲ್ಲ. ಹೀರೊ, ಹೀರೋಯಿನ್, ಅವರ ಫ್ರೆಂಡ್ಸ್, ಅಪ್ಪ ಅಮ್ಮ ಇರುವಂಥ ಮಾಮೂಲಿ ಕಥೆ ಅಲ್ಲ ಇದು. ನೇರವಾಗಿ ಏನನ್ನು ಹೇಳಬೇಕೋ ಅಷ್ಟನ್ನು ಹೇಳುವ ಗಟ್ಟಿ ಕಥೆಯಿದೆ. ಹಾಗಾಗಿಯೇ ನನಗೆ ಇಷ್ಟವಾಯ್ತು. ಅಲ್ಲದೆ ನಾನು ಲೋಹಿತ್ ಅವರ ಮೊದಲ ಸಿನಿಮಾ 'ಮಮ್ಮಿ' ನೋಡಿ ತುಂಬ ಇಷ್ಟಪಟ್ಟಿದ್ದೆ. ಅವರೇ ಮತ್ತೊಂದು ಹಾರರ್ ಸಿನಿಮಾ ಮಾಡುತ್ತಿದ್ದಾರೆ ಎಂದಮೇಲೆ ಒಪ್ಪಿಕೊಳ್ಳದೇ ಇರಲು ಸಾಧ್ಯವೇ? ಹಾಗಾಗಿ ಒಪ್ಪಿಕೊಂಡೆ' ಎಂದು ನಗುತ್ತಾರೆ ಅನುಶ್ರೀ.

ಅನುಶ್ರೀ ಅವರ ಪ್ರಕಾರ ಕಿರುತೆರೆಯಲ್ಲಿ ರಿಯಾಲಿಟಿ ಶೋ ಹೋಸ್ಟ್ ಮಾಡುವುದಕ್ಕೂ ಸಿನಿಮಾದಲ್ಲಿ ನಟಿಸುವುದಕ್ಕೂ ತುಂಬ ವ್ಯತ್ಯಾಸವೇನೂ ಇಲ್ಲ. ಅವರ ಪಾಲಿಗೆ ಎಲ್ಲವೂ ಕೆಲಸಗಳು ಅಷ್ಟೆ.

'ನನಗೆ ಎರಡೂ ಬೇರೆ ಬೇರೆ ಅನಿಸಲ್ಲ. ಅಲ್ಲಿ ದೊಡ್ಡ ಪರದೆ ಇರುತ್ತದೆ. ಈಗ ದೊಡ್ಡ ಟೀವಿಗಳಲ್ಲಿ ಕಾರ್ಯಕ್ರಮ ನೋಡುವವರೂ ಸಾಕಷ್ಟು ಹೆಚ್ಚಾಗಿದ್ದಾರೆ. ಅಲ್ಲಿ ನಾನು ಅನುಶ್ರೀ ಆಗಿಯೇ ಇರ್ತೀನಿ. ಇಲ್ಲಿ ಒಂದು ಪಾತ್ರವಾಗಿ ನಟಿಸುತ್ತಿರುತ್ತೇನೆ. ಬೇರೆ ಪಾತ್ರ ಬಂದಾಗ ಬೇರೆ ಹೆಸರಿರುತ್ತದೆ ಅಷ್ಟೆ' ಎನ್ನುವ ಅವರು ಈ ಸಿನಿಮಾವನ್ನು ಹಿರಿತೆರೆಗೆ ತಮ್ಮ ಕಮ್‌ಬ್ಯಾಕ್ ಎಂದೆಲ್ಲ ಹೇಳುವುದನ್ನು ಒಪ್ಪುವುದಿಲ್ಲ.

'ಕಮ್ ಬ್ಯಾಕ್ ಎನ್ನುವುದರ ಮೇಲೆಲ್ಲ ನನಗೆ ನಂಬಿಕೆ ಇಲ್ಲ. ನಾನು ಕಲಾವಿದೆ. ನನಗೆ ಕೆಲಸ ಬೇಕು. ಅದು ಕಿರುತೆರೆಯಲ್ಲಾದರೂ ಸಿಗಲಿ, ವೆಬ್‌ಸೀರೀಸ್‌ನಲ್ಲಾದರೂ ಸಿಗಲಿ, ಸಿನಿಮಾದಲ್ಲಾದರೂ ಸಿಗಲಿ. ನಾನು ಮಾಡುತ್ತೇನೆ. ಒಳ್ಳೆಯ ತಂಡ ಬಂದು ಸಿನಿಮಾದಲ್ಲಿ ನಟಿಸುವಂತೆ ಕೇಳಿದರೆ ನಟಿಸುತ್ತೇನೆ. ಈಗ ನಾನು ಒಪ್ಪಿಕೊಂಡಿರುವ ಸಿನಿಮಾ ತಂಡವೂ ಅಷ್ಟೇ. ಕಷ್ಟಪಟ್ಟು ಶ್ರದ್ಧೆಯಿಂದ ಕೆಲಸ ಮಾಡುವವರ ತಂಡ ಅದು. ನಾನೂ ಅಷ್ಟೇ ಶ್ರದ್ಧೆಯಿಂದ ಕೆಲಸ ಮಾಡುತ್ತೇನೆ' ಎನ್ನುತ್ತಾರೆ ಅವರು.

ತಮಗೆ ಸಾಕಷ್ಟು ಜನಪ್ರಿಯತೆಯನ್ನು ತಂದುಕೊಟ್ಟ ಕಿರುತೆರೆ ವೇದಿಕೆಯ ಕುರಿತೂ ಅವರಿಗೆ ಕೃತಜ್ಞತೆ ಇದೆ.

'ಈಗ ಹಿಂದೊಮ್ಮೆ ತಿರುಗಿ ನೋಡಿದರೆ ಕೃತಜ್ಞತಾಭಾವ ಹುಟ್ಟುತ್ತದೆ. ನಾನು ಯಾರಾದರೂ ನಾಲ್ಕು ಜನರಿಗೆ ಪರಿಚಿತಳಾದರೂ ಆಗುತ್ತೇನೋ ಇಲ್ಲವೋ ಎಂದೂ ಗೊತ್ತಿಲ್ಲದ ಸ್ಥಿತಿಯಿಂದ ಬಂದವಳು ನಾನು. ಕಳೆದ ಐದು ವರ್ಷಗಳಲ್ಲಿ ನನಗೆ ಸಾಕಷ್ಟು ಜನರ ಪ್ರೀತಿ ಸಿಕ್ಕಿದೆ. ನನ್ನ ಕೆಲಸ ನನ್ನನ್ನು ಇಲ್ಲಿಗೆ ಕರೆತಂದಿದೆ. ಕೆಲವೊಮ್ಮೆ ಇದೆಲ್ಲ ನಿಜವಾ ಅನಿಸಿಬಿಡುತ್ತದೆ. ಇನ್ನು ಕೆಲವು ಸಲ ನನ್ನ ಬೆನ್ನು ನಾನೇ ತಟ್ಟಿಕೊಳ್ಳುವುದೂ ಇದೆ. ಯಾಕೆಂದರೆ ಇದ್ಯಾವುದೂ ನನಗೆ ಸುಮ್ಮನೆ ಬಂದಿದ್ದಲ್ಲ. ಅದರ ಹಿಂದೆ ನನ್ನ ಶ್ರಮ ಇದೆ. ನಾನು ಇಂಡಸ್ಟ್ರಿಗೆ ಬಂದು ಹದಿನೈದು ವರ್ಷಗಳಾಗಿವೆ. ಕಳೆದ ಐದು ವರ್ಷಗಳಿಂದ ನನಗೆ ಜನಪ್ರಿಯತೆ ಸಿಗುತ್ತಿದೆಯಷ್ಟೆ. ಅದಕ್ಕಾಗಿ ನಾನು ಕಾದಿದ್ದೇನೆ. ದುಡಿದಿದ್ದೇನೆ. ಈಗ ನಾನು ಯಾರು? ನನ್ನ ಶಕ್ತಿ ಏನು ಎಂದು ತಿಳಿದುಕೊಂಡಿದ್ದೇನೆ. ಹಾಗಾಗಿಯೇ ತುಂಬ ಖುಷಿಯಾಗಿದ್ದೀನಿ' ಎಂದು ನಗುವ ಅನುಶ್ರೀ 'ಸೈತಾನ್' ಸಿನಿಮಾದ ಪಾತ್ರಕ್ಕಾಗಿಯೂ ಅಷ್ಟೇ ಶ್ರದ್ಧೆಯಿಂದ ಸಿದ್ಧಗೊಳ್ಳುತ್ತಿದ್ದಾರೆ. ■

# ಮೋಹಕ ತಾರೆ ಮರಳಿ ಬರುವರೇ?

ಮೋಹಕತಾರೆ ರಮ್ಯಾ ಕೆಲವರ್ಷಗಳ ಹಿಂದೆ ಸ್ಯಾಂಡಲ್‌ವುಡ್‌ನ ನಂಬರ್ ಒನ್ ನಟಿಯಾಗಿ ಮೆರೆದವರು. ನಂತರ ರಾಜಕಾರಣದಲ್ಲಿ ಸಕ್ರಿಯರಾಗಿ ಚಿತ್ರರಂಗದಿಂದ ದೂರವೇ ಆಗಿದ್ದರು. ಕಾಂಗ್ರೆಸ್ ಪಕ್ಷದ ಐಟಿ ವಿಭಾಗವನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತಿದ್ದ ಅವರು ಕಳೆದ ಸಾರ್ವತ್ರಿಕ ಚುನಾವಣೆಯ ನಂತರ ರಾಜಕಾರಣದಿಂದಲೂ ದೂರವಾಗಿದ್ದರು. ಸೋಷಿಯಲ್ ಮೀಡಿಯಾದಲ್ಲಿ ಆಗೀಗ ಕಾಣಿಸಿಕೊಳ್ಳುತ್ತ ಅಭಿಮಾನಿಗಳ ಜೊತೆ ಸಂವಹಿಸುತ್ತಿದ್ದ ಅವರು ಮಾಧ್ಯಮದವರೊಂದಿಗೆ ಮಾತಾಡಿದ್ದು, ಚಿತ್ರರಂಗದ ಕಾರ್ಯಕ್ರಮಗಳಲ್ಲಿ ಮುಖ ತೋರಿಸಿದ್ದು ವಿರಳಾತಿವಿರಳ.

ಅವರೀಗ ಚಂದನವನದಲ್ಲಿ ಎರಡನೇ ಇನಿಂಗ್ಸ್ ಆರಂಭಿಸುವ ಸಿದ್ಧತೆಯಲ್ಲಿದ್ದಾರೆ ಎಂಬ ಸುದ್ದಿಯೊಂದು ಗಾಂಧಿನಗರದ ಗಲ್ಲಿಗಳಿಂದ ಹೊರಟು ಸೋಷಿಯಲ್ ಮೀಡಿಯಾ ಬಯಲಿನಲ್ಲಿಯೂ ಹರಿದಾಡುತ್ತಿದೆ. ಹಾಗಂತ ಈ ಸುದ್ದಿಯನ್ನು ಸ್ವತಃ ರಮ್ಯಾ ಜಾಹೀರು ಮಾಡಿಲ್ಲ. ತಿರಸ್ಕರಿಸಿಯೂ ಇಲ್ಲ. ಗಾಂಧಿನಗರದ ಮೂಲಗಳ ಪ್ರಕಾರ ರಮ್ಯಾ ಮತ್ತೆ ಬಣ್ಣಹಚ್ಚುವ ಸಿದ್ಧತೆಯಲ್ಲಿರುವುದು ನಿಜ. ಕನ್ನಡದ ಹೆಸರಾಂತ ನಿರ್ಮಾಣ ಸಂಸ್ಥೆ 'ಹೊಂಬಾಳೆ ಫಿಲ್ಮ್ಸ್' ನಿರ್ಮಾಣದ ಸಿನಿಮಾವೊಂದರಲ್ಲಿ ಅವರು ನಟಿಸುತ್ತಿದ್ದಾರೆ ಎಂಬ ಸುದ್ದಿಯೂ ಚಿತ್ರರಂಗದ ಅರಳೀಮರದ ಬುಡದಲ್ಲಿ ಗಾಳಿಯಾಗಿ ಸುರುಳಿಹಾಕುತ್ತಿದೆ.

ರಮ್ಯಾ ಮತ್ತೆ ಹಿರಿತೆರೆಗೆ ರೀ ಎಂಟ್ರಿ ಮಾಡಿದರೆ ಮೊದಲಿನ ಹಾಗೆ ಪ್ರೇಕ್ಷಕರನ್ನು ಸಮ್ಮೋಹನಗೊಳಿಸಬಲ್ಲರೇ? ಅವರು ನಾಯಕಿಯಾಗಿಯೇ ನಟಿಸುತ್ತಾರೆಯೇ? ನಿರ್ಮಾಣ ಕಾರ್ಯಕ್ಕೂ ಇಳಿಯುತ್ತಾರೆಯೇ? ಯಾವ ನಟನೊಂದಿಗೆ ತೆರೆ ಹಂಚಿಕೊಳ್ಳಬಹುದು? ಈ ಎಲ್ಲ ಪ್ರಶ್ನೆಗಳು ಹರಟೆಕಟ್ಟೆಯಲ್ಲಿ ಜೋರು ಚರ್ಚೆಗೊಳಗಾಗುತ್ತಿವೆ. ಒಂದು ಕಾಲದಲ್ಲಿ ದೊಡ್ಡ ಅಭಿಮಾನಿ ಬಳಗದ ಹೃದಯಕ್ಕೆ ಕಿಚ್ಚು ಹಚ್ಚಿದ್ದ ಈ 'ಪದ್ಮಾವತಿ'ಯ ಕುರಿತು ಇಂಥ ನಿರೀಕ್ಷೆಗಳು, ಅನುಮಾನಗಳು ಸಹಜವೇ ಬಿಡಿ. ಆದರೆ ಆ ಪ್ರಶ್ನೆಗಳಿಗೆ ಉತ್ತರ ಸಿಗಬೇಕು ಅಂತಾದರೆ ರಮ್ಯಾ ನಟಿಸಿದ ಸಿನಿಮಾ ತೆರೆಕಾಣಬೇಕಷ್ಟೆ. ಇನ್ನೂ ಸಿನಿಮಾದಲ್ಲಿ ನಟಿಸುವುದನ್ನು ಅವರು ದೃಢೀಕರಿಸದೇ ಇರುವುದರಿಂದ ಮತ್ತಷ್ಟು ಕಾಲ ಕಾಯುವುದಷ್ಟೇ ಅಭಿಮಾನಿಗಳಿಗೆ ಉಳಿದಿರುವ ದಾರಿ. ■

